**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 327 |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ |
| ಉತ್ತರಿಸುವ ದಿನಾಂಕ | : | 18-02-2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಸಾಮಗ್ರಿಗಳು ಸಮರ್ಪವಾಗಿ ಸರಬರಾಜಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಗ್ರಿಗಳು ಸಮರ್ಪಕವಾಗಿ ಸರಬರಾಜು ಆಗುತ್ತಿರುತ್ತದೆ. |
| ಆ) | ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಟೆಂಡರ್ ಮೂಲಕ ಆಹ್ವಾನಿಸಿರುವ ದರಗಳಲ್ಲಿ ಲೋಪಗಳು ಕಂಡು ಬಂದಿವೆ; ಬಂದಿದ್ದಲ್ಲಿ, ಈ ಲೋಪಗಳನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮವನ್ನು ತೆಗೆದುಕೊಂಡಿದೆ ? | ಸಮಾಜ ಕಲ್ಯಾಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇರುವ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯವಿರುವ ಆಹಾರ ಸಾಮಗ್ರಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಆಹಾರ ಖರೀದಿ ಸಮಿತಿಯಿಂದ ಇ-ಟೆಂಡರ್ ಮೂಲಕ ನಿಯಮಾನುಸಾರ ಖರೀದಿಸಲಾಗುತ್ತಿದೆ.<br><br>ಮಂಡ್ಯ ಮತ್ತು ತುಮಕೂರು ಜಿಲ್ಲೆಯಲ್ಲಿನ ಇ-ಟೆಂಡರ್ ಪ್ರಕ್ರಿಯೆಯಲ್ಲಿ ನಮೂದಿಸಿರುವ ದರಗಳು ಮಾರುಕಟ್ಟೆ ದರಗಳಿಗಿಂತ ಅತಿ ಕಡಿಮೆ ದರಗಳನ್ನು ನಮೂದಿಸಿರುವ ಸದರಿ ಟೆಂಡರ್‌ಗಳನ್ನು ರದ್ದುಪಡಿಸಿ ಮರು ಟೆಂಡರ್ ಕರೆಯಲು ತೀರ್ಮಾನವಾಗಿರುತ್ತದೆ.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಆಹಾರ ಸರಬರಾಜು ಟೆಂಡರ್‌ನಲ್ಲಿ ಅವ್ಯವಹಾರವಾಗಿರುವ ಕುರಿತಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ತುಮಕೂರು ಜಿಲ್ಲೆ ಇವರನ್ನು ಹಾಗೂ ಕಚೇರಿ ವ್ಯವಸ್ಥಾಪಕರನ್ನು ಶಿಸ್ತು ಕ್ರಮ ಬಾಕಿ ಇರಿಸಿ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. ಟೆಂಡರ್‌ನಲ್ಲಿ ಅವ್ಯವಹಾರ ತಡೆಯುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳನ್ನು ಅನುಬಂಧದಲ್ಲಿ ನೀಡಿದೆ. |

ಸಕಇ 128 ಪಕವಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು.

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 327 ಕ್ಕೆ ಅನುಬಂಧ

ಟೆಂಡರ್‌ನಲ್ಲಿ ಅವ್ಯವಹಾರ ತಡೆಯುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 578 ಬಿಎಂಎಸ್ 2021 ದಿ: 30.11.2021ರಲ್ಲಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ/ಆಶ್ರಮ ಶಾಲೆಗಳ ನಿರ್ವಹಣೆಗಾಗಿ ಮಂಜೂರಾಗಿರುವ ಹುದ್ದೆಗಳು ಹಾಗೂ ಭರ್ತಿಯಾಗಿರುವ ಹುದ್ದೆಗಳ ವಿವರಗಳನ್ನು ನಮೂನೆಯಲ್ಲಿ ಭರ್ತಿ ಮಾಡಿ 0-4 ಅಳತೆಯ ಹಾಳೆಯಲ್ಲಿ ಪ್ರಿಂಟ್ ಔಟ್ ತೆಗೆದುಕೊಂಡು ಸೂಚನಾ ಫಲಕದ ಮೇಲೆ ಅಥವಾ ವಿದ್ಯಾರ್ಥಿನಿಲಯದ ದ್ವಾರದ ಕೊಠಡಿಯ ಒಳಗಿನ ಗೋಡೆಯ ಮೇಲೆ ಹಾಕುವುದು.
2. ವಿದ್ಯಾರ್ಥಿನಿಲಯದ ನಿಲಯಪಾಲಕರ/ವಾರ್ಡನ್/ ನಿಲಯ ಮೇಲ್ವಿಚಾರಕರ ವಿವರಗಳು
3. ವಿದ್ಯಾರ್ಥಿನಿಲಯದಲ್ಲಿ ಹಾಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ
4. ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿ ನಡೆದಿದ್ದಲ್ಲಿ ಮಾಹೆಯಾನ ಬಾಡಿಗೆ ವಿವರಗಳು, ಮುಂದುವರೆದು ವಿದ್ಯಾರ್ಥಿನಿಲಯಗಳ/ ಆಶ್ರಮಶಾಲೆಗಳ/ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ/ಪದವಿ ಪೂರ್ವ ಕಾಲೇಜುಗಳ ಸೂಚನಾ ಫಲಕದ ಮೇಲೆ ಅಥವಾ ವಿದ್ಯಾರ್ಥಿನಿಲಯದ ಪ್ರವೇಶ ದ್ವಾರದ ಕೊಠಡಿ ಒಳಗಿನ ಗೋಡೆಯ ಮೇಲೆ ಹಾಕಿರುವುದು.
5. ಪಡಿತರ ದರಗಳಲ್ಲಿ ಪಡೆಯಲಾಗುವ ಅಕ್ಕಿ ಮತ್ತು ಗೋದಿಯ ಸರಬರಾಜಿಗೆ ನಿಲಯಪಾಲಕರು/ವಾರ್ಡನ್/ನಿಲಯ ಮೇಲ್ವಿಚಾರಕರು ನೀಡಿದ ಬೇಡಿಕೆ ಪಟ್ಟಿ (Indent), ಭಾರತೀಯ ಆಹಾರ ನಿಗಮದ ಗೋದಾಮುಗಳಿಂದ ಆಹಾರ ಸಾಮಗ್ರಿಗಳ ಗುತ್ತಿಗೆದಾರ ಎತ್ತುವಳಿ ಮಾಡಿದ ಪ್ರಮಾಣ ಹಾಗೂ ವಿದ್ಯಾರ್ಥಿನಿಲಯದ ಬಾಗಿಲಿಗೆ ಸರಬರಾಜು ಮಾಡಿದ ಅಕ್ಕಿ, ಗೋದಿ ಪ್ರಮಾಣ ಹಾಗೂ ದಿನಾಂಕ, ಸಮಯ, ವಾಹನ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ದಾಖಲಿಸಿದ ಪ್ರತಿ.
6. ಉಳಿದ ಎಲ್ಲಾ ಆಹಾರ ಸಾಮಗ್ರಿಗಳಿಗೆ ನಿಲಯಪಾಲಕರು/ ವಾರ್ಡನ್/ನಿಲಯ ಮೇಲ್ವಿಚಾರಕರು ಪ್ರತಿ ತಿಂಗಳು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮೂಲಕ ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರರಿಗೆ ನೀಡುತ್ತಿರುವ ಬೇಡಿಕೆ ಪಟ್ಟಿ (Indent) ಪ್ರತಿ ಹಾಗೂ ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರ ವಿದ್ಯಾರ್ಥಿ ನಿಲಯದ ಬಾಗಿಲಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ ದಿನಾಂಕ, ಸಮಯ, ವಾಹನ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ಸಾಮಗ್ರಿಗಳನ್ನು ದಾಖಲಿಸಿದ ಪ್ರತಿ.
7. ವಿದ್ಯಾರ್ಥಿನಿಲಯದಲ್ಲಿ ಪ್ರತಿ ದಿನ ವಿದ್ಯಾರ್ಥಿಗಳಿಗೆ ನೀಡಲು ಹಾಲು ಸರಬರಾಜಿಗೆ ನೀಡಿದ ಬೇಡಿಕೆ ಪಟ್ಟಿಯ ಪ್ರತಿ (Indent).
8. ವಾರಕ್ಕೆ ತರಕಾರಿ, ಹಣ್ಣು, ಮೊಟ್ಟೆ, ಕೋಳಿ, ಮಾಂಸ ಸರಬರಾಜು ಮಾಡಲು ಬೇಡಿಕೆ ಪ್ರತಿ (Indent) ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರ ವಿದ್ಯಾರ್ಥಿನಿಲಯದ ಬಾಗಿಲಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ ದಿನಾಂಕ, ಸಮಯ, ವಾಹನ ನೊಂದಣಿ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ಸಾಮಗ್ರಿಗಳನ್ನು ದಾಖಲಿಸಿದ ಪ್ರತಿ.

9. ಪ್ರತಿ ಮಾಹೆ ವಿದ್ಯಾರ್ಥಿನಿಲಯದಲ್ಲಿ ನಿರ್ವಹಣೆಗಾಗಿ ಭರಿಸುತ್ತಿರುವ ಇತರೆ ವೆಚ್ಚಗಳ ವಿವರ.

10. ಯಶಸ್ವಿ ಗುತ್ತಿಗೆದಾರರ ಜೊತೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಾಡಿಕೊಂಡಿರುವ ಒಪ್ಪಂದದ ಪ್ರತಿ ಎಲ್ಲಾ ವಸತಿ ನಿಲಯಗಳಲ್ಲಿ ಕೂಡಲೇ ಲಭ್ಯವಿರತಕ್ಕದ್ದು.

ಪ್ರತಿ ದಿನ ಇಲಾಖೆಯಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಮತ್ತು ಆಶ್ರಮ ಶಾಲೆಗಳಲ್ಲಿ ಸಿಬ್ಬಂದಿ ಹಾಜರಾತಿ ವಿವರಗಳು ಮತ್ತು ಆ ದಿನದ ಮೆನು ಪ್ರಕಾರ ಉಗ್ರಾಣದಿಂದ ಸೆಳೆಯಲಾದ ಆಹಾರ ಪದಾರ್ಥಗಳು ಹಾಗೂ ಅದರ ಪ್ರಮಾಣ ಮತ್ತು ಸದರಿ ಆಶ್ರಮ ಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ವಿವರಗಳನ್ನು ಸಾರ್ವಜನಿಕ ವಲಯದಲ್ಲಿ ಪ್ರಚುರಪಡಿಸಲು ಕ್ರಮ ತೆಗೆದುಕೊಳ್ಳಲಾಗಿವೆ. ಅದೇ ರೀತಿ ಜಿಲ್ಲಾವಾರು, ತಾಲ್ಲೂಕುವಾರು, ಆಶ್ರಮ ಶಾಲೆವಾರು/ವಿದ್ಯಾರ್ಥಿನಿಲಯವಾರು ಮಂಜೂರಾತಿ ಮತ್ತು ದಾಖಲಾತಿ ಮತ್ತು ಹಾಲಿ ಇರುವ ವಿವರಗಳನ್ನು ಸಹ ಸಾರ್ವಜನಿಕ ವಲಯದಲ್ಲಿ ಪ್ರಚುರುಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.